**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಶಿಗ್ಗಾಂವ**

**ಸಿ.ಸಿ. ನಂ. 454/2022**

**ಡಿ ಡಬ್ಲು-1**

ಸಾಕ್ಷಿದಾರರ ಹೆಸರು :- ಶ್ರೀ. ಚಂದ್ರಪ್ಪ ತಂದೆ ದೇವಪ್ಪ ಬಸರಿಕಟ್ಟಿ

ವಯಸ್ಸು :- 42 ವರ್ಷಗಳು

ಉದ್ಯೋಗ :- ಕಾಳುಕಡಿ ವ್ಯಾಪಾರ

ವಾಸಸ್ಥಳ :- ಕಾಮನಹಳ್ಳಿ ಗ್ರಾಮ.

ದಿನಾಂಕಃ 11-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ- ಆರೋಪಿ ಪರ ಶ್ರೀ. ಪಿ ಎಮ್ ಜಿ ವಕೀಲರಿಂದ.**

ದೂರುದಾರರ ಪರಿಚಯ ಇರುತ್ತದೆ. ಅವರು ನನಗೆ ನಾನು ಹುಬ್ಬಳ್ಳಿಯಲ್ಲಿ ಅವರಲ್ಲಿ ಕೆಲಸಕ್ಕೆ ಹೋಗುತ್ತಿದ್ದರಿಂದ ಪರಿಚಯ ಹೊಂದಿರುತ್ತಾರೆ. ಹುಬ್ಬಳ್ಳಿಯ ಹಳೇ ಕಾಟಾ ಮಾರುಕಟ್ಟೆಯಲ್ಲಿ ದೂರುದಾರರದು ಕಾಳುಕಡಿ ವ್ಯಾಪಾರ ಇರುತ್ತದೆ. ನಾನು ಅವರಲ್ಲಿ ಕಾಳುಕಡಿ ಕಾಟಾಕ್ಕೆ ಹಚ್ಚುವುದು ಕೂಲಿ ಕೆಲಸ ಮಾಡುತ್ತಿದ್ದೆನು. ಅದೇ ರೀತಿ ರೈತರ ಬಳಿಯಿಂದ ಕಾಮನಹಳ್ಳಿಯಿಂದ ಕಾಳುಕಡಿ ತೆಗೆದುಕೊಳ್ಳುವ ಕೆಲಸ ಮಾಡುತ್ತಿದ್ದೆನು. ರೈತರಿಂದ ಪಡೆದುಕೊಂಡ ಕಾಳುಕಡಿಯನ್ನು ದೂರುದಾರರಿಗೆ ಕೊಡುತ್ತಿದ್ದೆನು. ರೈತರಿಂದ ಗೋವಿನ ಜೋಳ, ಹುರುಳಿ, ಹೆಸರು, ಜೋಳ, ಭತ್ತ ಪಡೆದುಕೊಂಡು ದೂರುದಾರರಿಗೆ ಕೊಡಿಸುತ್ತಿದ್ದೆನು. ನನ್ನ ಮತ್ತು ದೂರುದಾರರ ಈ

ಸಂಬಂಧ 2012 ರವರೆಗೆ ಇತ್ತು. ನಂತರ ಅವರೊಂದಿಗೆ ಯಾವುದೇ ಸಂಬಂಧ ಹೊಂದಿರುವುದಿಲ್ಲ. 2012 ರಲ್ಲಿ ಗೋವಿನ ಜೋಳದ ಫ್ಯಾಕ್ಟರಿ ಆಗಿದ್ದು, ಅದರಿಂದ ರೈತರು ಗೋವಿನ ಜೋಳ ನೀಡುವುದನ್ನು ಕಡಿಮೆ ಮಾಡಿದ್ದರಿಂದ ವ್ಯಾಪಾರ ಸಂಬಂಧ ಬಂದ ಆಗಿರುತ್ತದೆ. ನಂತರ ನಾನು ಬೇರೆ ಕಡೆ ಕೆಲಸ ಮಾಡುತ್ತಾ ಬಂದಿರುತ್ತೇನೆ. ಹುಬ್ಬಳ್ಳಿಯ ಮಾರುಕಟ್ಟೆಯಲ್ಲಿ ಗೋವಿನ ಜೋಳದ ಬೆಲೆ ಕಡಿಮೆ ಇದ್ದು, ಫ್ಯಾಕ್ಟರಿಯವರು ಹೆಚ್ಚಿಗೆ ಬೆಲೆ ನೀಡುತ್ತಿದ್ದರಿಂದ ನನ್ನ ಮತ್ತು ದೂರುದಾರರ ಮಧ್ಯೆ ವ್ಯಾಪಾರ ಸಂಬಂಧ ಕಡಿಮೆ ಆಯಿತು.

2. ದೂರುದಾರರು ನೀಡಿದ ಡಿಮ್ಯಾಂಡ್ ನೋಟೀಸು ಪಡೆದುಕೊಂಡ ನಂತರ ನಾನು ಅವರಲ್ಲಿ ಹೋಗಿ ವಿಚಾರಿಸಿದ್ದು, ಆಗ ದೂರುದಾರರು ಅದು ಬೇರೆಯವರಿಗೆ ನೀಡಿದ ನೋಟೀಸು ತಪ್ಪಾಗಿ ನಿನಗೆ ಬಂದಿರುವುದಾಗಿ ತಿಳಿಸಿರುತ್ತಾರೆ. ಸದರಿ ನೋಟೀಸನ್ನು ಶಂಕರ ಹಿರೇಮಠ ಇವರಿಗೆ ಕಳುಹಿಸಿರುವುದಾಗಿ ಹೇಳಿರುತ್ತಾರೆ. ಆದ್ದರಿಂದ ನಾನು ಸುಮ್ಮನೆ ಇದ್ದು ನೋಟೀಸಿಗೆ ಉತ್ತರ ಕೊಟ್ಟಿಲ್ಲ. ನಾನು ದೂರುದಾರರಲ್ಲಿ ಕೂಲಿ ಕೆಲಸ ಮಾಡುವುದನ್ನು ಹೊರತುಪಡಿಸಿ 2012 ರಲ್ಲಿ ಬೇರೆ ಯಾವುದೇ ಹಣಕಾಸಿನ ವ್ಯವಹಾರ ಮಾಡಿಲ್ಲ. ದೂರುದಾರರು ಆಧರಿಸುವ ನಿಪಿ-1 ಚೆಕ್ಕು ನನ್ನದು ಇರುವುದಿಲ್ಲ. ಅದರಲ್ಲಿರುವ ಬರವಣಿಗೆ ಮತ್ತು ಸಹಿ ನನ್ನದು ಇರುವುದಿಲ್ಲ. ನಾನು ಚೆಕ್ಕನ್ನು ಕನ್ನಡ ಭಾಷೆಯಲ್ಲಿ ಬರೆಯುತ್ತೇನೆ. ನನಗೆ ಇಂಗ್ಲೀಷ ಭಾಷೆ ಬರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.